ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೆ, ಹೌಸಿಂಗ್ ಬಗ್ಗೆ ರಾಜ್ಯದಲ್ಲಿ ಅಥವಾ ರಾಷ್ಟ್ರದಲ್ಲಿರತಕ್ಕಂಥ ಸಮಸ್ಯೆಯನ್ನು ತಪ್ಪಿಸುವ ದೃಷ್ಟಿಯಿಂದ ಅರ್ಬನ್ ಸೀಲಿಂಗ್ ಆಕ್ಟ್‌ನ್ನು ರದ್ದು ಪಡಿಸಿರತಕ್ಕಂಥ ಉದ್ದೇಶವಾಗಿರುತ್ತದೆ. ನಾನು ಹಿಂದೆ ನಗರಾಭಿವೃದ್ಧಿ ಸಚಿವನಾಗಿದ್ದಾಗ ಇದೇ ಸದನಕ್ಕೆ ಉತ್ತರ ಕೊಟ್ಟಿದ್ದೆ. ತಾವು ಹೇಳಿದ ರೀತಿಯಲ್ಲಿ ಅದರಿಂದ ನಮಗೇನೂ ಅನುಕೂಲ ಆಗಿಲ್ಲ. ಅದರಿಂದ ಶೇಕಡ 25ರಷ್ಟು ಕೂಡ ನಮಗೆ ಉಪಯೋಗವಾಗಿಲ್ಲ. ಸ್ವಾಧೀನ ತೆಗೆದುಕೊಂಡಂಥ ಜಮೀನುಗಳ ನಾನಾ ಪ್ರಕರಣಗಳು ಹೈಕೋರ್ಟಿನಲ್ಲಿ ಇವೆ. ಅದರಲ್ಲಿ ಶೇಕಡ 75 ಭಾಗ ಸ್ಟೇ ತೆಗೆದುಕೊಂಡಿರತಕ್ಕಂಥ ಪ್ರಕರಣಗಳಾಗಿವೆ. 25 ಭಾಗದಷ್ಟು ಸರ್ಕಾರವೇ ಉಪಯೋಗಿಸಿಕೊಳ್ಳುವುದಕ್ಕೆ ಕೊಟ್ಟಿರತಕ್ಕಂಥ ನಿದರ್ಶನಗಳು ಇವೆ. ಇಂಥ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಸಚಿವರಾದ ಶ್ರೀ ರಾಮಜೇಠ್ ಮಲಾನಿ ಅವರು ಮಾಡಿರುವಂಥದ್ದು ಮತ್ತು ಇದನ್ನು ಇಂಟ್ರಡ್ಯೂಸ್ ಮಾಡಿರುವುದೇ ಆ ಉದ್ದೇಶಕ್ಕಾಗಿ ಇದರ ಸದುದ್ದೇಶ ಆಗುತ್ತಿಲ್ಲ, ಇದರಿಂದ ಅನ್ಯಾಯವಾಗುತ್ತಿದೆ, ಇದು ಹೌಸಿಂಗ್ ಪ್ರಾಬ್ಲಮ್ಸ್ ಜಾಸ್ತಿ ಆರ್ಬನ್ ಏರಿಯಾಗಳಲ್ಲಿ ಆಗುತ್ತಿದೆ, ಆ ದೃಷ್ಟಿಯಲ್ಲಿ ಇದನ್ನು ಸರಿಪಡಿಸುವುದಕ್ಕೆ ಈಗಾಗಲೇ ತಿಳಿಸಿದಂತೆ ಸಚಿವ ಸಂಪುಟದಲ್ಲಿ ತೀರ್ಮಾನವಾಗಿ ಹೌಸ್‌ನಲ್ಲಿ ಇಂಟ್ರಡ್ಯೂಸ್ ಆಗಿ ರಿಸಲ್ಯೂಷನ್ ಆಗಬೇಕಾಗುತ್ತದೆ. ಅದನ್ನು ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

(ಒ) ಭದ್ರಾವತಿ ಕಾಗದ ಕಾರ್ಖಾನೆಯ ಅರಣ್ಯ ವಿಭಾಗದವರಿಂದ ಕಳೆದ 19ನೇ ತಾರೀಖಿನಿಂದ ಈ ಕಾರ್ಖಾನೆಯ ಆಡಳಿತ ಮಂಡಳಿಯ ವಿರುದ್ಧ ಪ್ರತಿಭಟನೆ ಸತ್ಯಾಗ್ರಹ

+ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, ಭದ್ರಾವತಿ ಕಾಗದ ಕಾರ್ಖಾನೆಯ ಅರಣ್ಯ ವಿಭಾಗದ ನೌಕರರು ಕಳೆದ 19ನೇ ತಾರೀಖಿನಿಂದ ಆ ಕಾರ್ಖಾನೆಯ ಆಡಳಿತ ಮಂಡಳಿಯು ವಿರುದ್ಧ ವಿಪರೀತ ಪ್ರತಿಭಟನೆ, ಸತ್ಯಾಗ್ರಹ ಮಾಡುತ್ತಿದ್ದಾರೆ. ಅದರಲ್ಲಿ ಟ್ರ್ಯಾಕ್ಟರ್ ಡ್ರೈವರ್‌ಗಳು, ಜೀಪ್ ಡ್ರೈವರ್‌ಗಳು, ಸಹಾಯಕರು, ವಾಚರ್‌ಗಳು ಸೇರಿ ನೂರಾರು ಯುವಕರು ತಮ್ಮ ಕೆಲಸ ಖಾಯಂ ಆಗುತ್ತದೆಂದು ಸುಮಾರು 15 ರಿಂದ 18 ವರ್ಷಗಳಿಂದ ಆ ವಿಭಾಗದಲ್ಲಿ ದುಡಿಮೆ ಮಾಡುತ್ತಿದ್ದಾರೆ. ಇದುವರೆಗೂ ಕೂಡ ಅವರನ್ನು ಖಾಯಂ ಮಾಡಲಿಲ್ಲ. ಅವರಲ್ಲಿ ಒಂದು ವಿಂಗ್ ಎಂದರೆ ಸ್ವಲ್ಪ ಜನರನ್ನು ಮಾತ್ರ ಖಾಯಂ ಮಾಡಿದರು. 10 ವರ್ಷ ಸರ್ಕಾರಿ ಸೇವೆ ಮಾಡಿದವರೆಲ್ಲರನ್ನೂ ಖಾಯಂ ಮಾಡಬೇಕೆನ್ನುವ ಕೋರ್ಟಿನ ತೀರ್ಪು ಇದ್ದರೂ ಕೂಡ ಸರ್ಕಾರಿ ಇಲಾಖೆಯ ಬೇರೆ ಬೇರೆ ಹುದ್ದೆಗಳಲ್ಲಿರುವಂಥ ದಿನಗೂಲಿ ನೌಕರನನ್ನು ಖಾಯಂ ಮಾಡಿದರೂ ಕೂಡ ಸರ್ಕಾರದ ಅಧೀನದಲ್ಲಿರತಕ್ಕಂಥ ಮೈಸೂರು ರಾಗದ ಕಾರ್ಖಾನೆಯ ನೌಕರರನ್ನು ಈ ನಿಯಮದೊಳಗೆ ಖಾಯಂ ಮಾಡುವುದಕ್ಕೆ ಇದುವರೆಗೆ ಯಾರೂ ಪ್ರಯತ್ನ ಮಾಡಲಿಲ್ಲ. ಹೀಗಾಗಿ ಅವರು ಸ್ಟ್ರೈಕ್ ಮಾಡುತ್ತಿದ್ದಾರೆ ಕೋಟಿಗಟ್ಟಲೆ ಹಣವನ್ನು ವಿದೇಶದಿಂದ ತಂದು ಅಲ್ಲಿ ಕಾಗದ ಕಾರ್ಖಾನೆಯ ಕಚ್ಚಾವಸ್ತುಗಳನ್ನು ತಯಾರು ಮಾಡಲಿಕ್ಕೋಸ್ಕರ ಬೆಳೆಸಿರತಕ್ಕಂಥ ಅರಣ್ಯ ನಾಶವಾಗುತ್ತಿದೆ, ಮತ್ತು ಒಂದು ಕೋಟಿಗಿಂತ ಹೆಚ್ಚಿಗೆ ಬೆಳೆಸಿರತಕ್ಕಂಥ ನರ್ಸರಿ ಗಿಡಗಳಿಗೆ ನೀರು ಹಾಕುವವರು ಇಲ್ಲ. ಅದನ್ನು ನೋಡಿಕೊಳ್ಳುವಂಥವರು ಇಲ್ಲ. ತಕ್ಷಣ ಆ ನೌಕರರನ್ನು ಕರೆದು ಮಾತನಾಡಬೇಕು ಮತ್ತು ಅವರನ್ನು ಖಾಯಂ ಮಾಡಬೇಕು. ಅವರ ಜೀವನಕ್ಕೆ ಭದ್ರತೆಯನ್ನು ಒದಗಿಸಿಕೊಡಬೇಕು ಮತ್ತು ವಿದೇಶದಿಂದ ಸಾಲ ತಂದು ಬೆಳೆಸಿರತಕ್ಕಂಥ ಕಾಡನ್ನು ಮತ್ತು ನರ್ಸರಿಯನ್ನು ರಕ್ಷಣೆ ಮಾಡುವುದರ ಬಗ್ಗೆ ಮಾನ್ಯ ಬೃಹತ್ ಕೈಗಾರಿಕೆ ಮಂತ್ರಿಗಳು ಒಂದು ಹೇಳಿಕೆಯನ್ನು ಸದನದಲ್ಲಿ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿಮಾಡಿಕೊಳ್ಳುತ್ತೇನೆ.

ಶ್ರಿ ಬಿ.ಎಲ್. ಶಂಕರ್ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮೈಸೂರು ಕಾಗದ ಕಾರ್ಖಾನೆಗೆ ಸಂಬಂಧಪಟ್ಟ ಹಾಗೆ ಕೆಲವು ದಿನಗೂಲಿ ನೌಕರರು ಕಳೆದ ತಿಂಗಳಿನಿಂದ ಮುಷ್ಕರ ಮಾಡುತ್ತಿರತಕ್ಕ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಸಂಬಂಧಪಟ್ಟ ಕಾರ್ಖಾನೆಯ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ಮತ್ತು ಇಲಾಖೆಯ ಕಾರ್ಯದರ್ಶಿಯವರು ಸಭೆಯನ್ನು ಶೀಘ್ರವಾಗಿ ಕರೆದು ಹಾಗೂ ಅಲ್ಲಿಯ ನೌಕರರ ಮುಖಂಡರನ್ನು ಕೂಡ ಇದರ ಬಗ್ಗೆ ಕರೆದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

(ಓ) ದಿನಾಂಕ 30-30-98ರಂದು ಗದಗ್ ನಗರದಲ್ಲಿ ಕಳ್ಳರನ್ನು ಹಿಡಿಯಲು ಹೋಗಿ ಕೊಲೆಯಾದವನಿಗೆ ಪರಿಹಾರ

ಶ್ರೀ ಡಿ.ಆರ್.ಪಾಟೀಲ್ (ಗದಗ ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, 30-3-1988 ರಂದು ಗದಗ್‌ನಗರದಲ್ಲಿ ಹಗಲು ಹೊತ್ತಿನಲ್ಲಿ ಕಳ್ಳತನ ಮಾಡಿದಂಥ ಕಳ್ಳರನ್ನು ಹಿಡಿಯಲು ಹೋಗಿ ಕಳ್ಳರ ಚೂರಿ ಇರಿತಕ್ಕೆ ಒಬ್ಬ ಬಲಿಯಾಗಿ ಅಸುನೀಗಿದ. ಅವನ ಕುಟುಂಬಕ್ಕೆ ಪರಿಹಾರ ಕೊಡಬೇಕೆಂದು ನಾನು ಒತ್ತಾಯ ಮಾಡಿದಾಗ 28-4-1998ರಂದು ಸದನದಲ್ಲಿ ಆಗಿನ ಗೃಹ ಸಚಿವರಾದ ಶ್ರೀ ರೋಷನ್ ಬೇಗ್ ಅವರು - ಮಾನ್ಯ ಸದಸ್ಯರು ಹೇಳಿದಂತೆ ಕಳ್ಳರನ್ನು ಹಿಡಿಯಲು ತನ್ನ ಜೀವನ ತೆತ್ತ ಒಂದು ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಎಂದು ನನಗೆ ಭರವಸೆ ಕೊಟ್ಟರು. 30-3-1999ರಂದು ಅವನ ವಾರ್ಷಿಕ ತಿಥಿ ಇದೆ. ಅಷ್ಟರೊಳಗೆ ಆ ಒಂದು ಲಕ್ಷ ರೂಪಾಯಿಗಳು ಅವನ ಮನೆಗೆ ತಲುಪಿಸುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಹಿಂದಿನ ಗೃಹಸಚಿವರು ಒಂದು ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಕೊಡುವ ತೀರ್ಮಾನವನ್ನು ಮಾಡಿದ್ದೇವೆ ಎನ್ನುವ ಭರವಸೆಯನ್ನು ನೀಡಿದ್ದಾರೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಆ ರೀತಿಯಾದಂಥ ಭರವಸೆ ಇಲ್ಲಿ ನೀಡಿರತಕ್ಕಂಥದ್ದು ನಿಜ ಆದರೆ ಆ ಭರವಸೆ ಪ್ರಕಾರ ಸರ್ಕಾರ ನಡೆದುಕೊಳ್ಳುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಅಃ) ನಿರುದ್ಯೋಗಿ ಶಿಕ್ಷಕರ ಕುರಿತು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪಾಧ್ಯಕ್ಷರೆ, ಸುಮಾರು 10-15 ವರ್ಷಗಳಿಂದ ಎಸ್.ಎಸ್.ಎಲ್.ಸಿ ಮತ್ತು ಟಿಸಿಹೆಚ್‌ನಲ್ಲಿ ತೇರ್ಗಡೆ ಹೊಂದಿರತ್ಕಂಥ ಸುಮಾರು 18 ಸಾವಿರ ಶಿಕ್ಷಕರು ನಿರುದ್ಯೋಗಿಗಳಾಗಿದ್ದಾರೆ. ಸನ್ಮಾನ್ಯ ಗೋವಿಂದೇಗೌಡರ ಜೊತೆಯಲ್ಲಿ ಇವರ ಬಗ್ಗೆ ಚರ್ಚೆ ಮಾಡಿದಾಗ- ತರಬೇತಿ ಜೇಷ್ಠತೆ ಮತ್ತು ವಯಸ್ಸಿನ ಜೇಷ್ಠತೆ ಮೇಲೆ 29 ವರ್ಷದ ಮೇಲಿನವರಿಗೆ ಕನಿಷ್ಠ 6 ರಿಂದ 7 ಸಾವಿರ ಜನ ಉಪಾಧ್ಯಯರಿಗೆ ಅವಕಾಶ ಮಾಡಿಕೊಡುವಂಥ ವಿಚಾರವನ್ನು ಹೇಳಿದ್ದಾರೆ. ಈಗಾಗಲೇ ಆ ಶಿಕ್ಷಕರ ವಯಸ್ಸು ಮೀರುತ್ತಿದೆ. ಆದ್ದರಿಂದ ದಯವಿಟ್ಟು ಮಾನ್ಯ ಮಂತ್ರಿಗಳು ಹಿಂದೆ ಏನು ಹೇಳಿದ್ದಾರೆ ಅದನ್ನು ಅನುಷ್ಠಾನಕ್ಕೆ ತರಬೇಕೆಂದು ತಮ್ಮ ಮೂಲಕ ಮಾನ್ಯ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.